# ರಾನಾ ದಿ ವಿಲನ್!

‘ಬಾಹುಬಲಿ–2’ ಚಿತ್ರ ಬಿಡುಗಡೆಯಾದ ಬಳಿಕ ರಾನಾ ದಗ್ಗುಬಾಟಿಯ ಅದೃಷ್ಟ ಎಷ್ಟರ ಮಟ್ಟಿಗೆ ಖುಲಾಯಿಸುತ್ತದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಬಾಲಿವುಡ್‌ನಲ್ಲಿ ಆತನ ಖದರು ಹೆಚ್ಚಾಗಿದೆ ಎನ್ನುವುದಂತೂ ನಿಜ. ‘ಬಾಹುಬಲಿ’ಯಲ್ಲಿ ರಾನಾ ನಿರ್ವಹಿಸಿದ ದೊರೆ ಬಲ್ಲಾಳರಾಯನ ಪಾತ್ರದ ಬಗ್ಗೆ ದೊಡ್ಡ ಮಟ್ಟದ ಮೆಚ್ಚುಗೆ ಎಲ್ಲೆಡೆ ಇದೆ. ಚಿತ್ರದ ನಾಯಕ ಪ್ರಭಾಸ್‌ನಿಗೆ ಸರಿಸಮನಾಗಿ ನಟಿಸಿದ್ದಾನೆ ಎಂಬ ಮೆಚ್ಚುಗೆ ವ್ಯಾಪಕವಾಗಿದೆ. ಖಳನಟನ ಇಮೇಜ್ ಅನ್ನೂ ಮೀರಿ ಆತ ನಟಿಸಿದ್ದಾನೆ ಎನ್ನುವುದು ಬಾಲಿವುಡ್ ಪಂಡಿತರ ಮಾತು. ಜೊತೆಗೆ ಬಾಲಿವುಡ್‌ನಲ್ಲಿ ಆತನ ಸ್ನೇಹಿತರ ಸಂಖ್ಯೆಯೂ ಹೆಚ್ಚಾಗಿದೆ. ಕಳೆದ ವಾರ ನಿರ್ಮಾಪಕ ಕರಣ್ ಜೋಹರ್ ನೀಡಿದ ಪಾರ್ಟಿಯಲ್ಲಿ ರಾನಾ ಜತೆಗೆ ವರುಣ್ ಧವನ್, ಅರ್ಜುನ್ ಕಪೂರ್, ರಣಬೀರ್ ಕಪೂರ್, ಅಲಿಯಾ ಭಟ್ ಮುಂತಾದವರೆಲ್ಲ ಸೇರಿದ್ದು ಮಾಧ್ಯಮಗಳಲ್ಲಿ ಸಾಕಷ್ಟು ಸುದ್ದಿಯಾಗಿದೆ.

ಈಗ ತೆಲುಗು, ತಮಿಳು, ಹಿಂದಿ ಸಿನಿಮಾಗಳಲ್ಲಿ ರಾನಾ ಸಾಕಷ್ಟು ಬ್ಯುಸಿ. ಸದ್ಯಕ್ಕೆ ಈತ ನಟಿಸಿದ ‘ನೇನೇ ರಾಜು ನೇನೇ ಮಂತ್ರಿ’ ತೆಲುಗು ಚಿತ್ರ ಹೆಚ್ಚು ಸುದ್ದಿಯಲ್ಲಿದೆ. ತೆಲುಗಿನ ಖ್ಯಾತ ನಟಿ ಕಾಜೊಲ್ ಅಗರವಾಲ್ ಜತೆ ಈತನ ನೃತ್ಯ ಮತ್ತು ಆ್ಯಕ್ಷನ್ ದೃಶ್ಯಗಳು ಸಾಕಷ್ಟು ಅಭಿಮಾನಿಗಳನ್ನು ರಂಜಿಸಿವೆ. ಹಿಂದಿ– ತೆಲುಗಿನಲ್ಲಿ ಈತ ನಾಯಕನಾಗಿ ನಟಿಸಿದ ಆ್ಯಕ್ಷನ್ ಚಿತ್ರ ‘ಘಾಜಿ’ ಚಿತ್ರ ಅಷ್ಟೇನೂ ದುಡ್ಡು ಮಾಡಲಿಲ್ಲವಾದರೂ, ಹಿಂದಿಯಲ್ಲಿ ಹೊಸ ಅಭಿಮಾನಿಗಳನ್ನು ಸೃಷ್ಟಿಸಿರುವುದು ಸುಳ್ಳಲ್ಲ. ತಮಿಳಿನಲ್ಲೂ ಈತನ ಹೊಸ ಚಿತ್ರದ ಶೂಟಿಂಗ್ ನಡೆದಿದೆ. ಇನ್ನೊಂದು ಚಿತ್ರ ‘ಮಾಥೈ ತಿರಂಧು’ ಬಿಡುಗಡೆಗೆ ಸಿದ್ಧವಾಗಿದೆ.

ತೆಲುಗು ಚಿತ್ರರಂಗದ ದಿಗ್ಗಜ ಡಿ.ರಾಮಾನಾಯ್ಡು ಅವರ ಮೊಮ್ಮಗನಾಗಿ ರಾನಾ ಹೆಸರು ಮಾಡಿದ್ದಲ್ಲ ಎನ್ನುವುದು ಕುತೂಹಲಕರ ಸಂಗತಿ. 6 ಅಡಿ 3 ಇಂದು ಎತ್ತರದ ಈ ಅಜಾನುಬಾಹು ಮೊದಲು ಚಿತ್ರರಂಗಕ್ಕೆ ಅಡಿಯಿಟ್ಟದ್ದು ವಿಶುವಲ್ ಎಫೆಕ್ಟ್ ಸಮನ್ವಯಕಾರನಾಗಿ. ಮಹೇಶ್‌ಬಾಬು ಅಭಿನಯದ ಸೂಪರ್‌ಹಿಟ್ ಚಿತ್ರ ‘ಸೈನಿಕುಡು’ ನಲ್ಲಿ ಈತ ವಿಶುವಲ್ ಎಫೆಕ್ಟ್ ನಿರ್ವಹಣೆಗಾಗಿಯೇ ರಾಜ್ಯ ಸರ್ಕಾರದ ನಂದಿ ಪ್ರಶಸ್ತಿ ಗೆದ್ದವನು. ಈತ ನಿರ್ಮಿಸಿದ ‘ಬೊಮ್ಮರಾಜ’ 2004ರಲ್ಲೇ ರಾಷ್ಟ್ರಪ್ರಶಸ್ತಿ ಗಳಿಸಿ, ನಿರ್ಮಾಪಕನಾಗಿ ಈತನಿಗೆ ಸ್ಥಾನ ಒದಗಿಸಿತ್ತು.

ನಿರ್ಮಾಪಕ, ವಿಶುವಲ್ ಎಫೆಕ್ಟ್ ಕೋಆರ್ಡಿನೇಟರ್, ಛಾಯಾಗ್ರಾಹಕ, ನಾಯಕ ನಟ, ಖಳನಾಯಕ, ಪೋಷಕ ನಟ– ಹೀಗೆ ಈತ ನಿರ್ವಹಿಸುತ್ತಿರುವ ವಿಭಿನ್ನ ಪಾತ್ರಗಳು ಕುತೂಹಲಕರ. ಗಡ್ಡ ಬೋಳಿಸಿ ಕ್ಲೀನ್ ಶೇವ್ ಮಾಡಿಕೊಂಡರೆ ಹೀರೋನಂತೆ ಕಾಣುವ ಈತ, ಗಡ್ಡ ಬಿಟ್ಟರೆ ಗಡಸು ವಿಲನ್ ಪಾತ್ರಕ್ಕೆ ಹೇಳಿಮಾಡಿಸಿದಂತೆ ಮಿಂಚುತ್ತಾನೆ. ‘ಬಾಹುಬಲಿ’ಯಲ್ಲಿ ಬಲ್ಲಾಳರಾಯನ ಪಾತ್ರ ಈತನ ಅಭಿಮಾನಿಗಳ ಸಂಖ್ಯೆಯನ್ನು ಸಾಕಷ್ಟು ಹೆಚ್ಚಿಸಿದೆ ಎನ್ನುವುದಂತೂ ನಿಜ. 32ರ ಹರೆಯದ ರಾನಾ, ಇದೀಗ ಹಿಂದಿಯಲ್ಲಿ ಸೂಪರ್‌ಹೀರೋಗಳ ಚಿತ್ರಗಳಿಗೆ ಸೂಪರ್ ಖಳನಾಗಿ ಎಂಟ್ರಿ ಕೊಡುವ ಸಿದ್ಧತೆಯಲ್ಲಿದ್ದಾನಂತೆ.

■ ಬಿಂದು

